# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 5 ಫ್ರಾ.ಸಾ. : 19**

| | | |
|---|---|---|
| ಸಾಕ್ಷಿಯ ಹೆಸರು | : | ಬಾಲಕೃಷ್ಣ ವಾಸುದೇವ ದುರ್ಗೇಕರ್ |
| ತಂದೆಯ ಹೆಸರು | : | ವಾಸುದೇವ ದುರ್ಗೇಕರ್ |
| ವಯಸ್ಸು | : | 39 ವರ್ಷ |
| ಕೆಲಸ | : | ಮೀನುಗಾರಿಕೆ |
| ವಾಸ | : | ಬೈತ್ ಕೋಲ್, ಕಾರವಾರ |

**ದಿನಾಂಕಃ 11-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಸಾಕ್ಷಿಗೆ ಈಗ ತೋರಿಸಿದ ನಿಪಿ-1 ಜಪ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-2 ಮತ್ತು 3 ಫೋಟೊಗಳಲ್ಲಿ ತನ್ನ ಇರುವಿಕೆಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೊಗಳನ್ನು ಸುಮಾರು 5 ವರ್ಷಗಳ ಹಿಂದೆ ಕಾರವಾರದ ಸಿವಿಲ್ ಆಸ್ಪತ್ರೆಯ ಬಳಿ ತೆಗೆದಿರುತ್ತಾರೆ ಹಾಗೂ ಅಲ್ಲಿ ನಿಪಿ-1 ರ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಮೊದಲು ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ಅಲ್ಲಿ ಎರಡು ಜನರು ಇದ್ದು, ನಂತರ ಪೊಲೀಸರು ಆ ಎರಡು ಜನರನ್ನು ಹಾಗೂ ನನ್ನನ್ನು ಕಾರವಾರದ ಸಿವಿಲ್ ಆಸ್ಪತ್ರೆಯ ಬಳಿಗೆ ಕರೆದುಕೊಂಡು ಹೋದರು. ಆ ಸ್ಥಳದಿಂದ ಯಾರನ್ನೋ ಗಾಡಿಯಲ್ಲಿ ಕರೆದುಕೊಂಡು ಹೋಗಿದ್ದರು ಎಂದು ತಿಳಿಸಿದರು ಹಾಗೂ ಅಲ್ಲಿ ಪೊಲೀಸರು ಪಂಚನಾಮೆ ಮಾಡಿ ನನ್ನ ಸಹಿಯನ್ನು ಪಡೆದುಕೊಂಡು, ಫೋಟೊ ತೆಗೆದರು.

2. ಸಾಕ್ಷಿಗೆ ಈಗ ತೋರಿಸಿದ ಜಪ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಜಪ್ತುಪಂಚನಾಮೆಯನ್ನು ಈಗಾಗಲೇ ನಿಪಿ-49 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-49(ಬಿ) ಎಂದು ಗುರುತಿಸಲಾಯಿತು.

ನಿಪಿ–50 ಫೋಟೊದಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೊವನ್ನು ಪೊಲೀಸ್ ಠಾಣೆಯ ಬಳಿ ತೆಗೆದಿರುತ್ತಾರೆ. ಸದರಿ ಫೋಟೊದಲ್ಲಿ ತಾನು ಹಾಗೂ ಚಾಸಾ–6 ನಾರಾಯಣ ಇರುವುದಾಗಿ ಗುರುತಿಸಿರುತ್ತಾರೆ ಹಾಗೂ ಬೈಕನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ನಾನು ಮಾರ್ಕೆಟ್ ಗೆ ಬಂದಿದ್ದು, ಪೊಲೀಸರು ನನ್ನನ್ನು ಪಂಚನಾಮೆಗೆ ಕರೆಸಿ, ನನ್ನ ಸಹಿ ಪಡೆದುಕೊಂಡರು ಹಾಗೂ ಫೋಟೊ ತೆಗೆದಿರುತ್ತಾರೆ. ಪೊಲೀಸರು ಯಾವ ವಿಷಯಕ್ಕಾಗಿ ಪಂಚನಾಮೆಗೆ ಕರೆಸಿದ್ದರು ಎಂದು ನನಗೆ ಗೊತ್ತಿಲ್ಲ ಹಾಗೂ ಏನನ್ನು ಜಪ್ತುಪಡಿಸಿಕೊಂಡರು ಎಂದು ನನಗೆ ಗೊತ್ತಿಲ್ಲ. ಆದರೆ, ಅಲ್ಲಿ ಒಂದು ಬೈಕ್ ಇತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ–</u>**

3. ಪೊಲೀಸರು ಪಂಚನಾಮೆ ಮಾಡಿದ ದಿನಾಂಕಃ 23–10–2018 ಆಗಿತ್ತು ಎಂದರೆ ಸರಿ. ಆ ದಿನ ನಾನು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಎರಡು ಜನರು ಇದ್ದರು ಎಂದು ನಾನು ಹೇಳಿದ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಮತ್ತು ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣುತ್ತಿರುವ 3 ನೇ ಆರೋಪಿ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ 2 ನೇ ಆರೊಪಿಯು ತಾನು ಹಾಗೂ 3 ನೇ ಆರೋಪಿ ಸೇರಿಕೊಂಡು ಪ್ರೇಮ್ ಕುಮಾರ ರವರನ್ನು ಹತ್ಯೆ ಮಾಡಲು ಪೂರ್ವದಲ್ಲಿ ತನ್ನ ಕಾರು ನಂ.ಎಂ.ಹೆಚ್–04/ಬಿಕೆ–0726 ನೇದನ್ನು ಕಾರವಾರಕ್ಕೆ ಚಲಾಯಿಸಿಕೊಂಡು ಬಂದು ಸದರಿ ಕಾರಿನಲ್ಲಿ ಪ್ರೇಮ ಕುಮಾರನನ್ನು ಕರೆದುಕೊಂಡು ಹೋದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ತಮ್ಮ ಲ್ಯಾಪ್ ಟಾಪ್ ಮತ್ತು ಪ್ರಿಂಟರ್ ನ್ನು ತೆಗೆದುಕೊಂಡು ನಮ್ಮನ್ನು ಹಾಗೂ 2 ನೇ ಮತ್ತು 3 ನೇ ಆರೋಪಿತರನ್ನು, 2 ನೇ ಆರೋಪಿ ಹೇಳಿದಂತೆ ಕಾರವಾರದ ಕ್ರಿಮ್ಸ್ ಆಸ್ಪತ್ರೆಗೆ ಬಳಿ ಕರೆದುಕೊಂಡು ಹೋದರು ಎಂದರೆ ಸರಿ. ಅಲ್ಲಿ 2 ನೇ ಆರೋಪಿ ಸ್ಥಳವನ್ನು ತೋರಿಸಿ ತಾನು ಇದೇ ಜಾಗದಿಂದ ಪ್ರೇಮ ಕುಮಾರನನ್ನು ನನ್ನ ಕಾರಿನಲ್ಲಿ ಕರೆದುಕೊಂಡು ಹೋಗಿರುವುದಾಗಿ ತೋರಿಸಿರುತ್ತಾನೆ ಎಂದರೆ ಗೊತ್ತಿಲ್ಲ. ನಂತರ

2 ನೇ ಆರೋಪಿಯು ಕಾರಿನಲ್ಲಿ ಪ್ರೇಮ ಕುಮಾರನನ್ನು ಕರೆದುಕೊಂಡು ಹೋಗುವ ಪೂರ್ವದಲ್ಲಿ, ಪ್ರೇಮ್ ಕುಮಾರನು ಮೋಟಾರು ಸೈಕಲನ್ನು ಚಲಾಯಿಸಿಕೊಂಡು ಬಂದು ಜಿಲ್ಲಾಸ್ಪತ್ರೆಯ ಆವರಣದಲ್ಲಿ ಇಟ್ಟಿರುವುದಾಗಿ ತಿಳಿಸಿ, ನಂತರ ನಮ್ಮನ್ನು ಜಿಲ್ಲಾಸ್ಪತ್ರೆಯ ಆವರಣಕ್ಕೆ ಕರೆದುಕೊಂಡು ಹೋಗಿ ಪ್ರೇಮ ಕುಮಾರನ ಮೋಟಾರು ಸೈಕಲ್ ನಂ.ಕೆಎ-19/ಈವಿ-8128 ನ್ನು ತೋರಿಸಿ, ಇದೇ ಪ್ರೇಮ ಕುಮಾರನ ಮೋಟಾರು ಸೈಕಲು ಎಂದು ತೋರಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು, ಆದರೆ ಬೈಕ್ ಇಟ್ಟಿರುವುದು ಮತ್ತು ನಾವು ನಿಂತಿರುವುದು ಹೌದು ಎಂದು ನುಡಿಯುತ್ತಾರೆ. ಅಲ್ಲಿ ನನ್ನ ಸಮಕ್ಷಮ ಪೊಲೀಸರು ಸದರಿ ಬೈಕನ್ನು ಜಪ್ತಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ಸಮಯ ಸಂಜೆ ಸುಮಾರು 7.00 ರಿಂದ 8.00 ಗಂಟೆಯಾಗಿತ್ತು ಎಂದರೆ ಸರಿ.

4. ದಿ.29-10-2018 ರಂದು ಪೊಲೀಸರು ನಮ್ಮನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಅಲ್ಲಿ ಚಾಸಾ-26 ರಮೇಶ ಲಮಾಣಿ ಎನ್ನುವವರು ನಿಪಿ-50 ರಲ್ಲಿ ಕಾಣುತ್ತಿರುವ ಬೈಕನ್ನು ತಂದು ಹಾಜರುಪಡಿಸಿ, ತಾನು ಸದರಿ ಬೈಕಿನ ಮಾಲೀಕನಿದ್ದು, ಅದನ್ನು ಗುನ್ನಾ ಸಮಯದಲ್ಲಿ 3 ನೇ ಆರೋಪಿಗೆ ನೀಡಿದ್ದೆ ಎಂದು ಹೇಳಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ ಪೊಲೀಸರು ನನ್ನ ಸಮಕ್ಷಮ ಬೈಕನ್ನು ಜಪ್ತುಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಚಾಸಾ-26 ರವರು ಹಾಜರುಪಡಿಸಿದ ಬೈಕ್ ಬಜಾಜ್ ಕಂಪನಿಯದ್ದಾಗಿದ್ದು, ಅದರ ನೊಂದಣಿ ನಂ.ಕೆಎ-65/ಹೆಚ್-2843 ಆಗಿತ್ತು ಎಂದರೆ ನನಗೆ ನೆನಪಿಲ್ಲ. ನಿಪಿ-49 ಜಪ್ತುಪಂಚನಾಮೆಯನ್ನು ಸಂಜೆ 6.30 ರಿಂದ 7.15 ರವರೆಗೆ ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆ ಮಾಡಿದ ಬಗ್ಗೆ ವಿಷಯ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ-**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

5. ಮೊದಲು ಪೊಲೀಸ್ ಠಾಣೆಯ ಬಳಿ ಪೊಲೀಸರು ಫೋಟೊ ತೆಗೆದಿರುತ್ತಾರೆ. ಆ ದಿನ ಪೊಲೀಸರು ಒಂದು ದಾಖಲೆಯ ಮೇಲೆ ನನ್ನ ಸಹಿಯನ್ನು ಪಡೆದುಕೊಂಡು ನಮ್ಮನ್ನು

ಕಳುಹಿಸಿರುತ್ತಾರೆ ಎಂದರೆ ಸರಿ. ಆ ದಿನ ಪೊಲೀಸರು ನನ್ನ ಮೊಬೈಲ್ ನಂಬರನ್ನು ಪಡೆದುಕೊಂಡಿದ್ದರು. ಪೊಲೀಸರು ಫೋಟೊ ತೆಗೆದ ನಂತರ ಅಂದಾಜು ಎರಡು ದಿನಗಳ ನಂತರ ಪೊಲೀಸರು ನಮ್ಮನ್ನು ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಆಸ್ಪತ್ರೆಯ ಬಳಿ ಪೊಲೀಸರು ನಮ್ಮನ್ನು ನಿಲ್ಲಲು ಹೇಳಿ ಫೋಟೊ ತೆಗೆದುಕೊಂಡರು ಎಂದರೆ ಸರಿ. ಎರಡೂ ಪಂಚನಾಮೆಗಳಿಗೆ ಪೊಲೀಸ್ ಠಾಣೆಯಲ್ಲಿ ಸಹಿಯನ್ನು ಪಡೆದುಕೊಂಡರು. ಎರಡೂ ಪಂಚನಾಮೆಗಳಲ್ಲಿ ಏನು ಬರೆಯಲಾಗಿದೆ ಮತ್ತು ಯಾವ ವಿಷಯಕ್ಕಾಗಿ ಪಂಚನಾಮೆ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಪೊಲೀಸರು ನಮಗೆ ನಿಲ್ಲಿಸಿ ಫೋಟೋ ತೆಗೆದರು ಮತ್ತು ಪೊಲೀಸರು ಹೇಳಿದಂತೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/–

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ